# ಗುರ್ವಷ್ಟಕಮ್

## ಶ್ರೀಮಚ್ಚಂದ್ರಿಕಾಚಾರ್ಯರ ಪರಮಪ್ರೇಮಾಸ್ಪದ ಶಿಷ್ಯರಾದ ಶ್ರೀ ಶ್ರೀನಿವಾಸತೀರ್ಥಶ್ರೀಪಾದಂಗಳವರ ಸ್ತೋತ್ರದ ಅರ್ಥಾನುಸಂಧಾನ

ಸಮಗ್ರ ಶ್ರೀಮದ್ಭಾಗವತವನ್ನು ವಿದ್ವತ್ಸಭೆಯಲ್ಲಿ ವ್ಯಾಖ್ಯಾನ ಮಾಡಿ ಶ್ರೀಮಚ್ಚಂದ್ರಿಕಾಚಾರ್ಯರ ಪರಮಾನುಗ್ರಹಕ್ಕೆ ಪಾತ್ರರಾಗಿ ಅವರಿಂದ ಸಂನ್ಯಾಸಾಶ್ರಮವನ್ನು ಪಡೆದ,

ಇಪ್ಪತ್ತೈದು ವರ್ಷಗಳ ವೇದಾಂತಸಾಮ್ರಾಜ್ಯದ ಅಧಿಪತಿಗಳಾಗಿ, ಮೂಲಗೋಪಾಲಕೃಷ್ಣ, ಮೂಲಪಟ್ಟಾಭಿರಾಮ, ಶ್ರೀಲಕ್ಷ್ಮೀನೃಸಿಂಹ ಶ್ರೀವೇದವ್ಯಾಸದೇವರನ್ನು ವಿಶೇಷವಾಗಿ ಆರಾಧನೆ ಮಾಡಿದ

ಸಮಗ್ರ ತಾತ್ಪರ್ಯಚಂದ್ರಿಕಾಗ್ರಂಥದ ಸಮೇತವಾಗಿ ತತ್ವಪ್ರಕಾಶಿಕಾ ಬ್ರಹ್ಮಸೂತ್ರಭಾಷ್ಯಗಳನ್ನು ಏಳುಬಾರಿ ಶಿಷ್ಯರಿಗೆ ಪಾಠಹೇಳಿದ,

ದುರ್ವಾದಿಗಳಿಗೆ ಸಿಂಹಸ್ವಪ್ನರಾಗಿದ್ದ, ಶ್ರೇಷ್ಠಯೋಗಶಕ್ತಿಯ ಆಗರರಾಗಿದ್ದ,

ಶ್ರೀಮಚ್ಚಂದ್ರಿಕಾಚಾರ್ಯರಿಂದ ಅಪೂರ್ವವಾದ ನರಸಿಂಹಮಂತ್ರದ ಉಪದೇಶವನ್ನು ಪಡೆದು ಶಿಷ್ಯರಾದ ಶ್ರೀ ರಾಮತೀರ್ಥರಿಗೆ ಉಪದೇಶ ಮಾಡಿದ,

ನಿರ್ಯಾಣಕ್ಕಿಂತ ಮುಂಚೆ ಶ್ರೀಮಚ್ಚಂದ್ರಿಕಾ-ಚಾರ್ಯರ ವೃಂದಾವನದ ಸಾನ್ನಿಧ್ಯದಲ್ಲಿ ಚತುರ್ಥಾಧ್ಯಾಯದ ಭಾಷ್ಯ, ತಾತ್ಪರ್ಯನಿರ್ಣಯದ 32ನೆಯ ಅಧ್ಯಾಯನದ ಉಪದೇಶವನ್ನು ಶಿಷ್ಯರಿಗೆ ಮಾಡುತ್ತ ಕಾಷ್ಠಮೌನವ್ರತವನ್ನು ಆಚರಿಸಿ ರಕ್ತಾಕ್ಷಸಂವತ್ಸರದ ವೈಶಾಖ ಬಹುಳ ಪಂಚಮಿಯಂದು ಯೋಗಶಕ್ತಿಯಿಂದ ದೇಹತ್ಯಾಗ ಮಾಡಿದ

ಯೋಗಿವರ್ಯ ಶ್ರೀ ಶ್ರೀನಿವಾಸತೀರ್ಥ ಶ್ರೀಪಾದಂಗಳವರು  ಎಂಬ ಮಹಾಮಹಿಮ ಗುರುಗಳನ್ನು ಭಕ್ತಿಯಿಂದ ಸ್ಮರಿಸಿ ನಮಿಸೋಣ.

**॥ ಶ್ರೀರಾಮತೀರ್ಥಕೃತಂ ಗುರ್ವಷ್ಟಕಮ್ ॥**

**ಗುರುಭಕ್ತೌ ವಿರಕ್ತೌ ಚ**
**ಯಸ್ಯ ನಾಸ್ತಿ ಸಮೋ ಭುವಿ ।**
**ಶ್ರೀನಿವಾಸಗುರುಂ ನೌಮಿ**
**ವ್ಯಾಸತೀರ್ಥಾರ್ಯಕಿಂಕರಮ್ ॥ ೧ ॥**

ಗುರುಭಕ್ತಿಯಲ್ಲಿ, ವೈರಾಗ್ಯದಲ್ಲಿ ಯಾರಿಗೆ ಸಮರಾದವರು ಜಗತ್ತಿನಲ್ಲಿಲ್ಲ, ಅಂತಹ ಶ್ರೀಮಚ್ಚಂದ್ರಿಕಾಚಾರ್ಯರ ಪಾದಸೇವಕರಾದ ಶ್ರೀನಿವಾಸತೀರ್ಥರಿಗೆ ನಮಿಸುತ್ತೇನೆ.

**ಶ್ರೀಮದ್ಭಾಗವತಂ ಸರ್ವಂ**
**ವ್ಯಾಖ್ಯಾಯ ಬುಧಸಂಸದಿ ।**
**ವ್ಯಾಸಾರ್ಯಾದಾಶ್ರಮಂ ಲೇಭೇ**
**ತುರ್ಯಂ ಸ ಪ್ರೀಯತಾಂ ಗುರುಃ ॥ ೨ ॥**

ಸಮಗ್ರವಾದ ಶ್ರೀಮದ್ ಭಾಗವತವನ್ನು ವಿದ್ವತ್ಸಭೆಯಲ್ಲಿ ವ್ಯಾಖ್ಯಾನ ಮಾಡಿದ ಕಾರಣಕ್ಕೆ ಶ್ರೀಮಚ್ಚಂದ್ರಿಕಾಚಾರ್ಯರಿಂದ ಯಾರು ಸಂನ್ಯಾಸಾಶ್ರಮವನ್ನು ಪಡೆದರೋ ಅಂತಹ ಗುರುಗಳು ನನ್ನ ಮೇಲೆ ವಾತ್ಸಲ್ಯ ತೋರಲಿ.

**ಪ್ರಹ್ಲಾದಸ್ಯಾವತಾರೇಣ**
**ವ್ಯಾಸತೀರ್ಥೇನ ಧೀಮತಾ ।**
**ಯೋ ಲಬ್ಧವಾನ್ ನಾರಸಿಂಹ-**
**ಮನುಂ ಸ ಪ್ರೀಯತಾಂ ಗುರುಃ ॥ ೩ ॥**

ನರಸಿಂಹನನ್ನು ಸಾಕ್ಷಾತ್ಕರಿಸಿಕೊಂಡ ಪ್ರಹ್ಲಾದರಾಜರ ಅವತಾರರಾದ ಮಹಾಜ್ಞಾನದ ಶ್ರೀಮಚ್ಚಂದ್ರಿಕಾಚಾರ್ಯರಿಂದಲೇ ಅಪೂರ್ವನರಸಿಂಹಮಂತ್ರೋಪದೇಶವನ್ನು[1] ಪಡೆದ ಶ್ರೀನಿವಾಸತೀರ್ಥರು ನನ್ನ ಮೇಲೆ ವಾತ್ಸಲ್ಯವನ್ನು ತೋರಲಿ.

---

[1] ಈ ಘಟನೆಯ ಕುರಿತು ವಿಸ್ತೃತವಾದ ಚಿತ್ರಣ ವಿಶ್ವನಂದಿನಿ ಉಪನ್ಯಾಸಮಾಲಿಕೆ [VNU025, 26] ನಲ್ಲಿ ಪ್ರಕಟವಾಗಿದೆ. ಆಲಿಸಿ.

**ತಾತ್ಪರ್ಯಚಂದ್ರಿಕಾಯಕ್ತ-**
**ಟೀಕಾಯುಗ್ಭಾಷ್ಯಬೋಧನಮ್ ।**
**ಸಪ್ತವಾರಂ ಕೃತಂ ಯೇನ**
**ಪ್ರೀಯತಾಂ ಸ ಗುರೂತ್ತಮಃ ॥ ೪ ॥**

ತಾತ್ಪರ್ಯಚಂದ್ರಿಕಾ, ತತ್ವಪ್ರಕಾಶಿಕಾಗಳ ಸಮೇತವಾಗಿ ಏಳು ಬಾರಿ ಶ್ರೀಮದ್ ಭಾಷ್ಯದ ಅರ್ಥವನ್ನು ಶಿಷ್ಯಮಂಡಳಿಗೆ ಉಪದೇಶಿಸಿದ ಆ ಗುರುವರ್ಯರು ನನ್ನ ಮೇಲೆ ವಾತ್ಸಲ್ಯವನ್ನು ತೋರಲಿ.

**ಭಾಷ್ಯವ್ಯಾಖ್ಯಾನಕುಶಲಂ**
**ಟೀಕಾತಾತ್ಪರ್ಯಬೋಧಕಮ್ ।**
**ಚಂದ್ರಿಕಾರ್ಥೋಪದೇಷ್ಟಾರಂ**
**ಶ್ರೀನಿವಾಸಗುರುಂ ಭಜೇ ॥ ೫ ॥**

ಶ್ರೀಮದ್ಭಾಷ್ಯದ ಅರ್ಥವನ್ನು ಹೇಳುವದರಲ್ಲಿ ಪ್ರವೀಣರಾದ ಟೀಕಾಗ್ರಂಥಗಳ ಅಭಿಪ್ರಾಯವನ್ನು ಪರಿಸ್ಪಷ್ಟವಾಗಿ ತಿಳಿಸುವ ಚಂದ್ರಿಕಾಗ್ರಂಥದ ಅಪೂರ್ವಾರ್ಥಗಳನ್ನು ಉಪದೇಶಿಸುವ ಶ್ರೀ ಶ್ರೀನಿವಾಸತೀರ್ಥರನ್ನು ಭಜಿಸುತ್ತೇನೆ.

**ಸಂಸತ್ಸು ವಿದ್ವತ್ಸೇವ್ಯಾಸು**
**ರಾಜತೇ ಸಿಂಹರಾಡಿವ ।**
**ಸ್ಥಾಪಯನ್ ವ್ಯಾಸತೀರ್ಥಾರ್ಯ-**
**ಮತಂ ದುರ್ಮತಭಂಜಕಃ ॥ ೬ ॥**

ವಿದ್ವಜ್ಜನರಿಂದ ತುಂಬಿದ ಸಭೆಗಳಲ್ಲಿ ದುರ್ಮತಗಳನ್ನು ಖಂಡಿಸಿ, ಶ್ರೀ ಚಂದ್ರಿಕಾಚಾರ್ಯರು ತಿಳಿಸಿದ ತತ್ವಗಳನ್ನು ಪ್ರತಿಪಾದಿಸಿ, ಸಿಂಹದಂತೇ ಶೋಭಿಸುತ್ತಾರೆ ಶ್ರೀ ಶ್ರೀನಿವಾಸತೀರ್ಥರು.

**ವ್ರತಿನೋ ಗೃಹಿಣೋ ಬ್ರಹ್ಮ-**
**ಚಾರಿಣೋ ಧರ್ಮಮುತ್ತಮಮ್ ।**
**ಯಮಾಶ್ರಿತ್ಯ ಚರಂತೀಹ**
**ತಮಹಂ ನೌಮಿ ಸದ್ಗುರುಮ್ ॥ ೭ ॥**

ಬ್ರಹ್ಮಚಾರಿಗಳು, ಗೃಹಸ್ಥರು, ಸಂನ್ಯಾಸಿಗಳು ಎಲ್ಲರೂ ಯಾರನ್ನು ಆಶ್ರಯಿಸಿ ಶ್ರೇಷ್ಠ ಧರ್ಮಗಳ ಆಚರಣೆಯನ್ನು ಮಾಡುತ್ತಾರೆಯೋ ಅಂತಹ ಸರ್ವಸಜ್ಜನಗುರುಗಳಾದ ಶ್ರೀ ಶ್ರೀನಿವಾಸತೀರ್ಥರಿಗೆ ನಮಸ್ಕರಿಸುತ್ತೇನೆ.

**ಆಪದ್ವಿಘಾತಿನೀ ಯಸ್ಯ ನಾಮ್ನಃ**
**ಪುಣ್ಯಸ್ಯ ಸಂಸ್ಮೃತಿಃ ।**
**ತಂ ವಂದೇ ಶ್ರೀನಿವಾಸಾರ್ಯಂ**
**ಮನೋವಾಕ್ಕರ್ಮಭಿಃ ಸದಾ ॥ ೮ ॥**

ಯಾರ ಪವಿತ್ರವಾದ ನಾಮಸ್ಮರಣೆಯಿಂದ ಸಕಲ ಆಪತ್ತುಗಳೂ ದೂರವಾಗುತ್ತವೆಯೋ ಅಂತಹ ಶ್ರೀ ಶ್ರೀನಿವಾಸತೀರ್ಥಶ್ರೀಪಾದರನ್ನು ಕಾಯಾ ವಾಚಾ ಮನಸಾ ವಂದಿಸುತ್ತೇನೆ.

**ಶ್ರೀನಿವಾಸಾರ್ಯಶಿಷ್ಯೇಣ**
**ರಾಮತೀರ್ಥೇನ ಭಿಕ್ಷುಣಾ ।**
**ರಚಿತಂ ಗುರ್ವಷ್ಟಕಂ ಭಕ್ತ್ಯಾ**
**ವಿಪತ್ತೂಲಾಗ್ನಿಸನ್ನಿಭಮ್ ॥ ೯ ॥**

ಆಪತ್ತುಗಳು ಎಂಬ ಹತ್ತಿಯ ರಾಶಿಗೆ ಬೆಂಕಿಯಂತಿರುವ ಈ ಗುರ್ವಷ್ಟಕವನ್ನು ಶ್ರೀ ಶ್ರೀನಿವಾಸತೀರ್ಥಶ್ರೀಪಾದಂಗಳವರ ಶಿಷ್ಯರಾದ ಶ್ರೀರಾಮತೀರ್ಥರು ಎಂಬ ಯತಿಗಳಿಂದ ಭಕ್ತಿಯಿಂದ ರಚಿಸಲ್ಪಟ್ಟಿದೆ.

**॥ ಇತಿ ಶ್ರೀರಾಮತೀರ್ಥಕೃತಂ ಗುರ್ವಷ್ಟಕಮ್ ॥**

ಶ್ರೀ ಶ್ರೀನಿವಾಸತೀರ್ಥಶ್ರೀಪಾದಂಗಳವರು ದೇಹತ್ಯಾಗ ಮಾಡಿದ್ದು ರಕ್ತಾಕ್ಷಸಂವತ್ಸರದ ವೈಶಾಖ ಬಹುಳ ಪಂಚಮಿಯಂದು. ಅದಾದ ಎಂಟು ತಿಂಗಳಿಗೆ ವಿಜಯನಗರ ಸಾಮ್ರಾಜ್ಯ ಪತನವಾಗುತ್ತದೆ.

ಆ ಘೋರ ಸಂದರ್ಭದಲ್ಲಿ ಶಿಷ್ಯವರ್ಗವನ್ನು ರಕ್ಷಣೆ ಮಾಡುವ ಸಾಮರ್ಥ್ಯ ಬರಲಿ ಎಂದು ಶ್ರೀನರಸಿಂಹಮಂತ್ರದ ಉಪದೇಶವನ್ನು ತಮ್ಮ ಶಿಷ್ಯರಾದ ಶ್ರೀ ರಾಮತೀರ್ಥರಿಗೆ ಮಾಡಿರುತ್ತಾರೆ.

ಶ್ರೀ ರಾಮತೀರ್ಥರು ಗುರುಗಳ ಆಜ್ಞೆಯನ್ನು ಶಿರಸಾ ವಹಿಸಿ ಗುರುಗಳ ಅನುಗ್ರಹದಿಂದ ಆ ಆಪತ್ಕಾಲದಲ್ಲಿ ಸಜ್ಜನರನ್ನು ರಕ್ಷಣೆ ಮಾಡುತ್ತಾರೆ.

ರಾಜಕೀಯವಿಪ್ಲವದ ಆ ವಿಷಮಕಾಲದಲ್ಲಿ ಪ್ರತೀದಿವಸವೂ ಬಂದೊದಗುತ್ತಿದ್ದ ನಾನವಿಧ ಆಪತ್ತುಗಳ ಪರಿಹಾರಕ್ಕಾಗಿ ಶ್ರೀ ರಾಮತೀರ್ಥಶ್ರೀಪಾದಂಗಳವರು ರಚಿಸಿದ ಗುರ್ವಷ್ಟಕವಿದು. ಸಿದ್ಧ ಸ್ತೋತ್ರ.

ಶ್ರೀ ರಾಮತೀರ್ಥರು, ಶ್ರೀ ಶ್ರೀನಿವಾಸತೀರ್ಥರು ಶ್ರೀಮಚ್ಚಂದ್ರಿಕಾಚಾರ್ಯರು, ಶ್ರೀ ಬ್ರಹ್ಮಣ್ಯತೀರ್ಥರು ಶ್ರೀ ರಾಜೇಂದ್ರತೀರ್ಥರು, ಶ್ರೀಮಟ್ಟೀಕಾಕೃತ್ಪಾದರು ಶ್ರೀ ಪದ್ಮನಾಭತೀರ್ಥರು ಶ್ರೀಮದಾಚಾರ್ಯರು ನಮ್ಮ ಶ್ರೀಮದ್ ವ್ಯಾಸರಾಜಸಂಸ್ಥಾನದ ಮಹಾವೈಭವ ಮತ್ತೆ ಮರುಕಳಿಸುವಂತೆ ಅನುಗ್ರಹಿಸಲಿ ಎಂದು ಭಕ್ತಿಯಿಂದ ಪ್ರಾರ್ಥನೆ ಮಾಡೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491